ಪಾರುಪತ್ಯ ಮಾಡುತ್ತಾ ತಿರುಗುವವ ಇವತ್ತು ಎಲ್ಲಾದರೂ ಗಲಾಟೆ ಹೇಳಿ ಸಿಕ್ಕಿಕೊಂಡರೆ, ತನ್ನ ಹೆಣಕ್ಕೆ ಕೊಳ್ಳಿ ಇಡಲೇ ಹುಟ್ಟಿದವ, ಇವನೇ ಏನಾದರೂ ಮಾಡಿಕೊಂಡರೆ ಎಂಬೆಲ್ಲ ಭಯ ಕಾಡತೊಡಗಿತು.

ಓದಿದವಳಲ್ಲದಿದ್ದರೂ ಗಲಾಟೆಯೆಲ್ಲ ದೊಡ್ಡವರ ಕುಮ್ಮಕ್ಕಿಲ್ಲದೆ ನಡೆಯುವುದಲ್ಲ ಎಂದು ತಿಳಿಯದವಳಲ್ಲ ಸುಕ್ಕರಿ, ಮುದಿ ರಕ್ತಕ್ಕೆ ಇವೆಲ್ಲ ತಿಳಿದರೂ ಕುದಿ ರಕ್ತಕ್ಕೆ ಇದೆಲ್ಲ ತಿಳಿಯಬೇಕಲ್ಲ!!

ಹತಾರ ತುಂಬಿದ ಭೂಷಣನ ಗೂಡ್ಸ್ ಗಾಡಿ ರಸ್ತೆ ಮೇಲೆ ನಿಂತು ಪೀಂ ಪೋಂ ಮಾಡಿದ್ದೇ ಗಡಬಡಿಸಿ ಹೊರಟ ಮಹೇಶ. ರಾಚ, ಪಾಚು, ಮೆಸ್ತ ಆದಾಗಲೇ ಗಾಡಿಯೊಳಗಿದ್ದಿದ್ದು ಕಂಡು ಮಹೇಶನಿಗೆ ಆರಾಮೆನಿಸಿತು. ಭೂಷಣನಿಗೆ ತಮ್ಮ ಮೇಲೆ ಯಾವುದೇ ಸಂಶಯ ಬರಬಾರದೆಂದು ಗಾಡಿಯಲ್ಲಿ ಕುಳಿತಲ್ಲಿಂದಲೂ ಕುಮಟೆಯಲ್ಲಿ ಮಾಡಬೇಕಾದ ದಾಂದಲೆಗಳ ಬಗ್ಗೆಯೇ ಮಾತನಾಡಲಾಯಿತು.

'ಕೈಯೆತ್ತಿ ಲಾಠಿ ಬೀಸೊಂದು ಬೀಸಲಿ, ಕುಠಾರೆ ಕಾವಲ್ಲಿ ಪೊಲೀಸ್ನೋರಾದ್ರೂ ಸರಿಯೇ, ಮುಖ ಮುಸುಡು ನೋಡದೆ ಹೊಡೆದುಬಿಡುವದೇ' ಅಂತ ಮೆಸ್ತ ಹೇಳಿದರೆ, 'ನಮ್ಮೂರಿಗೆ ಬಂದು ನಮ್ಮೇ ಎದುರು ಹಾಕ್ಕಳುವ ಧೈರ್ಯ ಯಾರಿಗಿದೆ, ಹಾಂಗೇನಾದ್ರೂ ಮಾಡೀರೆ ಅವ್ರನ್ನ ಹುಡಕ್ಕಂಡು ಹೋಗಿ ಹೊಡೆದು ಬರ್ಬೇಕು. ನಮ್ಮೊಳಗೊಳಗೆ ಎಷ್ಟೇ ಮನಸ್ತಾಪ, ಗಲಾಟೆ ಇದ್ರೂ ಈ ಟೈಮಲ್ಲಿ ಅದ್ನೆಲ್ಲ ಮರ್ತು ಒಂದಾಗ್ಲೇಬೇಕು' ಎಂದು ತನ್ನ ಪಕ್ಕದಲ್ಲಿ ಕುಳಿತ ಮೆಸ್ತ, ಮೆಸ್ತನ ಎಡಕ್ಕೆ ಕುಳಿತ ಪಾಚನಿಗೇ ಸಂಶಯ ಬರುವಷ್ಟು ಖಡಾಖಂಡಿತವಾಗಿ ಹೇಳಿದ ಮಹೇಶ.

ಮತ್ತೇನಿಲ್ಲ, ರಾಗುವಿನ ಮೇಲೆ ತಾನು ಯಾವುದೇ ಹಗೆತನ ಸಾಧಿಸುತ್ತಿಲ್ಲ ಎಂಬುದನ್ನು ಭೂಷಣನಿಗೆ ಸಾಬೀತುಪಡಿಸಬೇಕಿತ್ತು ಮಹೇಶನಿಗೆ ಅಷ್ಟೇ. ಕೆಲವೊಮ್ಮೆ ತಮ್ಮ ಸಾಚಾತನವನ್ನು ತೋರಿಸಿಕೊಳ್ಳಲು ಕೈಯಲ್ಲಷ್ಟೇ ಅಲ್ಲ, ಬಾಯಲ್ಲಿಯೂ ಪ್ರಯತ್ನಿಸುತ್ತಿರಬೇಕು. ಎಲ್ಲರೂ ನಂಬುವುದು ಬಾಯಿಂದ ಉದುರಿದ ಮಾತನ್ನೇ ಹೊರತು ಮನಸ್ಸಿನಲ್ಲಿದ್ದಿದ್ದನಲ್ಲ! ನಾವು ಒಳ್ಳೆಯವರಾಗಿದ್ದೂ ಬಾಯಲ್ಲಿ ಕೆಟ್ಟವರಾದರೆ ಸ್ವಂತಕ್ಕೇನೂ ಉಪಯೋಗವಿಲ್ಲವೆನ್ನುವುದು ಮಹೇಶನಿಗೆ ಚೆನ್ನಾಗಿಯೇ ಅರಿವಿತ್ತು.

ಹಳ್ಳಾಕ್ರು ಮುರ್ಕಿಯಲ್ಲಿ ಎಡಕ್ಕೆ ತಿರುಗಿ ಹೆಗಡೆ ಬದಿಯಿಂದ ಇಬ್ಬರು, ಮತ್ತೆ ಗಾಡಿ ತಿರುಗಿಸಿಕೊಂಡು ಬಂದು ಮೂರ್ಕಟ್ಟೆ ಬದಿಯಿಂದ ಇಬ್ಬರು ಇಳಿದು ಹೋರಾಟದ ಗುಂಪು ಸೇರುವುದು ಎಂದು ಮಾತಾಯಿತು. ಭೂಷಣ ಆ ನಾಲ್ವರನ್ನೂ ಅವರಿಗೆ ಬೇಕಾದಲ್ಲಿ ಇಳಿಸಿ ಮತ್ತೆ ಕಾಗಾಲಿಗೆ ಹೊರಟ.

ಅದಾಗಲೇ ಸಾವಿರಗಟ್ಟಲೆ ಜನ ಸೇರಿ ಘೋಷಣೆ ಕೂಗುತ್ತ, ಕುಮಟೆ ಪೇಟೆಯಲ್ಲೆಲ್ಲ ಚದುರಿ ಗಲಾಟೆ ಮಾಡುವ ತರಾತುರಿಯಲ್ಲಿದ್ದರು. ತುರ್ತಿಗೆ ನಾಯಕತ್ವ ವಹಿಸಿಕೊಂಡ ಕೆಲವರು ಒಂದಿಷ್ಟು ಜನರನ್ನು ಸೇರಿಸಿಕೊಂಡು ಭಾಷಣದಲ್ಲಿಯೂ ತೊಡಗಿದ್ದರು.

'ಮಗು ಅತ್ತರೆ ಮಾತ್ರ ತಾಯಿ ಹಾಲುಣ್ಣಿಸುವುದು, ಅನ್ಯಾಯದ ವಿರುದ್ಧ ಧ್ವನಿ ಎತ್ತಿದರೆ ಮಾತ್ರ ನಮಗಾದ ಅನ್ಯಾಯ ಏನು ಎಂದು ಎಲ್ಲರಿಗೂ ಅರ್ಥವಾಗುವುದು. ನ್ಯಾಯ ನಮ್ಮ ಜನ್ಮಸಿದ್ಧ ಹಕ್ಕು, ನ್ಯಾಯಕ್ಕಾಗಿ ನಾವು ಏನು ಬೇಕಾದರೂ ಮಾಡಲು ಸಿದ್ಧರಾಗಿರಬೇಕು' ಎಂದು ಕೆಲವರು ನೆರೆದಿರುವವರಲ್ಲಿ ಅಭಿಮಾನ ಕೆರಳಿಸುತ್ತ ಹುರಿದುಂಬಿಸುತ್ತಿದ್ದರು.

ಮತ್ತೊಬ್ಬವನ್ಯಾರೊ ನಾಲ್ಕಾರು ಜನರನ್ನು ಸೇರಿಸಿಕೊಂಡು, 'ಅನ್ಯಾಯ ನಿಮಗಷ್ಟೇ ಅಲ್ಲ, ನಮಗೂ ಆಗಿದೆ. ನೋವು ನಿಮಗಷ್ಟೇ ಅಲ್ಲ ನಮಗೂ ಇದೆ. ಆದರೆ ಹಿಂಸೆಯಿಂದ ನ್ಯಾಯ ಸಿಗುತ್ತದೆಯೆಂಬುದು ಸುಳ್ಳೇ. ಹಿಂಸೆಯಿಂದ ಹಾನಿ ನಮಗೇ, ನಷ್ಟವೂ ನಮಗೇ, ಶಿಕ್ಷೆಯೂ